ತ್ತಿದ್ದರೆ ಅಂಥವುಗಳ ಮೇಲೆ ತಕ್ಷಣ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೇವೆ. ಎಲ್ಲೆಲ್ಲಿ ಇಲ್ಲೀಗಲ್ ಚಟುವಟಿಕೆಗಳು ನಡೆಯುತ್ತವೆ ಅವುಗಳನ್ನು ಪತ್ತೆ ಮಾಡಿ ತತ್‌ಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ. ಆ ಬಗ್ಗೆ ಸರ್ಕಾರದವರು ಹಿಂದು ಮುಂದು ನೋಡುವುದಿಲ್ಲ.

SRe M. RAJASHEKARA MURTHY :- Is it not a fact that since arrack is being supplied by the Government it self to the contractors, label is not necessary ?

MR. SPEAKER :- The Hon. Member is asking that since arrack is supplied by the Government to the contractor, labels are not necessary ?

SRI K. SHIVAMURTHY :- Yes.

ಶ್ರೀ ಕೆ. ಹೆಚ್. ರಂಗನಾಥ್ :- ಈಗ ಸಾರಾಯಿಗೆ ಲೇಬಲ್ ಹಾಕುವುದಿಲ್ಲ ಮತ್ತು ಸಾರಾಯಿಯನ್ನು ಬಾಟ್ಲ್‌ನಲ್ಲಿ ಸಪ್ಲೈ ಮಾಡುತ್ತಿಲ್ಲ, ಪ್ಲಾಸ್ಟಿಕ್ ಚೀಲಗಳಲ್ಲಿ ಸಪ್ಲೈ ಆಗುತ್ತಾ ಇದೆ ಎಂದು ಹೇಳಿದ್ದಾರೆ. ಹೀಗೆ ಸಾರಾಯಿಯನ್ನು ಬಾಟ್ಲ್‌ಗೆ ಬದಲಾಗಿ ಪ್ಲಾಸ್ಟಿಕ್ ಚೀಲಗಳಲ್ಲಿ ಹಾಕಿ ಮಾರಾಟ ಮಾಡುವುದಕ್ಕೆ ಯಾವಾಗ ಪರವಾನಿಗೆ ಕೊಟ್ಟಿದ್ದುದು ? ಹಾಗೆ ಪರವಾನಿಗೆಯನ್ನು ಕೊಟ್ಟಿದ್ದರೆ ಏತಕ್ಕೋಸ್ಕರವಾಗಿ ಕೊಟ್ಟಿದ್ದುದು ?

ಶ್ರೀ ಕೆ. ಶಿವಮೂರ್ತಿ :- ಸಾರಾಯಿಯನ್ನು ಬಾಟ್ಲ್‌ಗಳ ಬದಲಾಗಿ ಪ್ಲಾಸ್ಟಿಕ್ ಚೀಲಗಳಲ್ಲಿ ಸಪ್ಲೈ ಮಾಡುವುದಕ್ಕೆ ಸರಕಾರದವರು ಪರವಾನಗಿ ಕೊಟ್ಟಿಲ್ಲ. ಪ್ಲಾಸ್ಟಿಕ್ ಚೀಲದಲ್ಲಿ ಸಾರಾಯಿ ತುಂಬಿಸಿ ಮಾರುವುದು ಕಾನೂನಿಗೆ ವಿರುದ್ಧವಾಗಿದೆ. ನಮ್ಮ ಇಲಾಖೆಯ ಎನ್‌ಫೋರ್ಸ್‌ಮೆಂಟ್‌ಸೆಲ್‌ನವರು ಎಲ್ಲೆಲ್ಲಿ ಈ ರೀತಿ ನಡೆಯುತ್ತಿದೆ ಅದನ್ನು ಪತ್ತೆ ಹಚ್ಚಿ ರೈಡ್ ಮಾಡಿದ್ದಾರೆ. ಅದನ್ನು ಪತ್ರಿಕೆಗಳಲ್ಲಿಯೂ ನಾವು ಕೊಟ್ಟಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್ :- ಮಾನ್ಯ ಸಚಿವರು ಈ ಬಗ್ಗೆ ಸ್ವಲ್ಪ ನೋಡಿ ಉತ್ತರ ಕೊಡಬೇಕು. ಏಕೆಂದರೆ ಬಾಟಲ್‌ಗಳು ಕಡಿಮೆ ಇರುವುದರಿಂದ ಸೇಲ್ ಆಗತಕ್ಕಂಥ ಕ್ವಾಂಟಿಟಿ ಜಾಸ್ತಿ ಇರುವುದರಿಂದ ಪ್ಲಾಸ್ಟಿಕ್ ಚೀಲದಲ್ಲಿ ಮಾರಾಟ ಮಾಡಲು ಸರಕಾರದವರು ಪರವಾನಿಗೆ ಕೊಟ್ಟಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. subject to verification. ಆದುದರಿಂದ ಮಾನ್ಯ ಸಚಿವರು ಇದನ್ನು ಪರಿಶೀಲನೆ ಮಾಡಿ ಉತ್ತರ ಹೇಳಬೇಕು. ಸಾರಾಯಿಯನ್ನು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಮಾರಾಟ ಮಾಡುವುದಕ್ಕೆ ಸರ್ಕಾರ ಅನುಮತಿ ಕೊಡದೇ ಹೋಗಿದ್ದರೆ ಈಗ ಪ್ಲಾಸ್ಟಿಕ್ ಚೀಲಗಳಲ್ಲಿ ಸಪ್ಲೈ ವ್ಯವಹಾರ ಆಗುತ್ತಿದೆ, ಮಾರಾಟ ಆಗುತ್ತಾ ಇದೆ, ಅದು ಸರಕಾರದ ಗಮನಕ್ಕೆ ಬಂದಿಲ್ಲವೆ ? ಬಂದಿದ್ದರೆ ಆ ಕುರಿತು ಸರಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಕೆ. ಶಿವಮೂರ್ತಿ :- ಇಂಥ ಪ್ರಕರಣಗಳನ್ನು ಈಗಾಗಲೇ ನಾವು ಹಿಡಿದಿದ್ದೇವೆ. ನಾನು ಸಚಿವನಾದ ಮೇಲೆ ನಮ್ಮ ಇಲಾಖೆಯವರು ಎಲ್ಲೆಲ್ಲಿ ಇಂಥ ಅವ್ಯವಹಾರಗಳು ನಡೆಯುತ್ತಿವೆ, ಅವುಗಳನ್ನು ಪತ್ತೆ ಹಚ್ಚಿ ಹಿಡಿದಿದ್ದಾರೆ. ಮತ್ತು ತಪ್ಪಿತಸ್ಥರಮೇಲೆ ಕ್ರಮ ತೆಗೆದುಕೊಂಡಿದೆ. ಮತ್ತು ಎಲ್ಲೆಲ್ಲಿ ಪ್ಲಾಸ್ಟಿಕ್ ಚೀಲಗಳಲ್ಲಿ ಸಾರಾಯಿಯನ್ನು ತುಂಬಿ ಮಾರಾಟ ಮಾಡುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಗಮನ ಸೆಳೆದಿದ್ದಾರೆ ಅಂಥವುಗಳನ್ನು ಪತ್ತೆ ಹಚ್ಚಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ನಮ್ಮ ಇಲಾಖೆಯವರಿಗೆ ಆದೇಶ ಕೊಟ್ಟಿದ್ದೇವೆ. ತತ್‌ಕ್ಷಣ ಆಕ್ರಮ ವ್ಯವಹಾರಗಳನ್ನು ತಡೆಗಟ್ಟಲು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ.

ವಿಷಯ :- ರಾಜ್ಯದಲ್ಲಿ ಗುಂಪು ಘರ್ಷಣೆಗಳಿಂದ ಸತ್ತವರ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 287 (689)

ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) :- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ 1990ನೇ ಸಾಲಿನಲ್ಲಿ ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್ ತಿಂಗಳುಗಳಲ್ಲಿ ಗುಂಪು ಘರ್ಷಣೆಯಿಂದ ಸತ್ತವರ ಸಂಖ್ಯೆ ಎಷ್ಟು ? ಗಾಯಗೊಂಡವರ ಸಂಖ್ಯೆ ಎಷ್ಟು ಹಾಗೂ ಅವರು ಕಳೆದುಕೊಂಡಿರುವ ಆಸ್ತಿಪಾಸ್ತಿಗಳ ಮೊತ್ತವೆಷ್ಟು ?

ಆ) ಹಾಗಿದ್ದಲ್ಲಿ, ಅವರಿಗೆ ಸಹಾಯ ಧನವನ್ನಾಗಿ ಇದುವರೆವಿಗೂ ಕೊಟ್ಟಿರುವ ಹಣದ ಮೊತ್ತವೆಷ್ಟು, ಕೊಡಬೇಕಾಗಿರುವ ಮೊತ್ತವೆಷ್ಟು ಹಾಗೂ ಯಾವಾಗ ಪೂರ್ಣ ಮೊತ್ತವನ್ನು ನೀಡಲಾಗುವುದು ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಸಚಿವರು) :–

ಅ) ಒಟ್ಟು 69 ಜನ ಮೃತಪಟ್ಟಿದ್ದು, 562 ಜನ ಗಾಯಗೊಂಡಿದ್ದಾರೆ. ಸುಮಾರು 1823 ಜನರು ತಮ್ಮ ಆಸ್ತಿ–ಪಾಸ್ತಿಗಳ ನಷ್ಟ ಅನುಭವಿಸಿದ್ದಾರೆ ಈ ಆಸ್ತಿಪಾಸ್ತಿಗಳ ನಷ್ಟ ಸುಮಾರು ರೂ. 4,13.85,907-00 ಗಳಷ್ಟು ಆಗಿದೆ.

ಆ) ಇದುವರೆವಿಗೂ ಸುಮಾರು 1,68,00,000–00 ರೂ.ಗಳ ಪರಿಹಾರವನ್ನು ಮೃತಪಟ್ಟವರ ವಾರಸುದಾರರಿಗೆ ಹಾಗೂ ನೊಂದ ಇತರರಿಗೆ ಪಾವತಿ ಮಾಡಲಾಗಿದೆ.

ಪ್ರಕರಣಗಳ ಸ್ವರೂಪಕ್ಕೆ ಅನುಗುಣವಾಗಿ ಜಿಲ್ಲಾ ವಿಭಾಗಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಸಂತ್ರಸ್ಥರಿಗೆ ಪರಿಹಾರ ಮಂಜೂರಾತಿಯನ್ನು ತ್ವರಿತವಾಗಿ ಮಾಡುತ್ತಿದ್ದಾರೆ.

ಶ್ರೀ ಎಂ. ವಿ. ವೆಂಕಟಪ್ಪ :– ಈಗ ರಾಜ್ಯದಾದ್ಯಂತ ಪರಿಸ್ಥಿತಿಯು ಹೇಗೆ ಇದೆ ? ಎರಡನೆಯದಾಗಿ ಮುಳಬಾಗಿಲು ಟೌನ್‌ನಲ್ಲಿ ಒಬ್ಬ ಡಾಕ್ಟರ್ ಷಾಪನ್ನು ಗುಂಪು ಘರ್ಷಣೆಯಿಂದಾಗಿ ನಾಶ ಮಾಡಿದರು. ಅದರಲ್ಲಿ ಸುಮಾರು 2 ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆಯೆಂದು ಅಸೆಸ್ ಮಾಡಿದ್ದಾರೆ. ಇನ್ನೊಂದು ಕಡೆ ಕ್ಲಾಕ್ ಷಾಪ್ ನಾಶವಾಗಿದೆ. ಅದರಲ್ಲಿ ನಾಲ್ಕು ಲಕ್ಷ ರೂಪಾಯಿಗಳು ನಷ್ಟವಾಗಿದೆಯೆಂದು ಇದನ್ನು ಸರಕಾರದವರೇ ಅಸೆಸ್ ಮಾಡಿದ್ದಾರೆ. ತಹಶೀಲ್ದಾರ್‌ರವರು ಅಸೆಸ್ ಮಾಡಿದ್ದಾರೆ. ಅಂತಹ ಕಡೆ ನೀವು ಪರಿಹಾರ ಕೊಡುವುದು ಎಷ್ಟು, 15 ಸಾವಿರ ಇದ್ದರೆ ಗರಿಷ್ಟ ಎಂದು ವಿಭಾಗಾಧಿಕಾರಿಗಳ ಲೆವೆಲ್‌ಗೆ ಬಂದರೆ 20 ಸಾವಿರ ಕೊಡುತ್ತೀರಿ, ಅಂತಹವರಿಗೆ ಸಾಲ ಕೊಡಿಸುವುದು, ಮನೆ ಕಳೆದುಕೊಂಡವರಿಗೆ ಮನೆ ಕಟ್ಟಲು ಸಾಲ ಕೊಡಿಸುವ ವ್ಯವಸ್ಥೆ ಮಾಡುವಿರಾ ?

ಶ್ರೀ ಧರ್ಮಸಿಂಗ್ :– ಪ್ರಪ್ರಥಮವಾಗಿ ಇಂದು ಕರ್ನಾಟಕದಲ್ಲಿ ಶಾಂತಿ ನೆಲೆಸಿದೆ, ಯಾವುದೂ ಗಲಾಟೆ ಯಾಗುತ್ತಿಲ್ಲ. ಎರಡನೆಯದಾಗಿ ಮುಳಬಾಗಿಲಿನಲ್ಲಿ ಏನಾಯಿತು ಎಂದು ಹೇಳಿದಿರಿ ಅದು ಪ್ರತ್ಯೇಕ ಪ್ರಶ್ನೆ. ಅದರ ಬಗ್ಗೆ ಕೂಡ ನಾನು ವರದಿ ತರಿಸುತ್ತೇನೆ. ದಿನಾಂಕ 6–10–90 ಕ್ಕೆ ಒಂದು ಆಜ್ಞೆ ಹೊರಡಿಸಿದ್ದೇವೆ. ಅದರಲ್ಲಿ 2 ಸಾವಿರ ಕನಿಷ್ಟ ಇದ್ದರೂ ಜಿಲ್ಲಾಧಿಕಾರಿ ಲೆವೆಲ್‌ನಲ್ಲಿ 10 ಸಾವಿರ, ಡಿವಿಜಿನಲ್ ಕಮಿಷನರ್ ಲೆವೆಲ್‌ನಲ್ಲಿ 20 ಸಾವಿರ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಈಗಾಗಲೇ ಆಸ್ತಿ ನಷ್ಟವಾಗಿರುವುದು 4 ಕೋಟಿ, ಆದರೆ 1 ಕೋಟಿ 68 ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ ಮತ್ತು ಬೇರೆ ಕಡೆ ಎಲ್ಲೆಲ್ಲಿ ಎರಡು ಲಕ್ಷ, ಮೂರು ಲಕ್ಷ ಹಾನಿಯಾಗಿದೆ, ಆ ವಿವರಗಳು ಸರ್ಕಾರಕ್ಕೆ ಬಂದಿವೆ, ಅವರಿಗೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಿಂದ ಲೋನ್ 5 ವರ್ಷದ್ದು ಕೊಡಿಸುವ ವ್ಯವಸ್ಥೆ ಸರ್ಕಾರ ಮಾಡುತ್ತಿದೆ.

ಶ್ರೀ ಎಂ. ವಿ. ವೆಂಕಟಪ್ಪ :– ಮುಳಬಾಗಿಲ್ ಟೌನ್‌ನಲ್ಲಿ ಹಿಂದೆ ಫೈರಿಂಗ್ ಆಯಿತು, ಅದರಲ್ಲಿ ಒಬ್ಬ ಸತ್ತ. ಆದರೆ ಪೋಲೀಸರು ಫೈರಿಂಗ್‌ನಲ್ಲಿ ಸತ್ತ ಎಂದು ಹೇಳದೆ ಸ್ಟ್ಯಾಬಿಂಗ್‌ನಿಂದ ಸತ್ತ ಎಂದು ಹೇಳಿದರು. ಅದರ ವಿವರಗಳನ್ನು ಮುಖ್ಯಮಂತ್ರಿಗಳು ಹೋದ ಸದನದಲ್ಲಿ ಕಳಿಸಿಕೊಡಿ ಎಂದು ಹೇಳಿದ ಪ್ರಕಾರ ಈಗ ಕಳಿಸಿಕೊಡುತ್ತಿದ್ದೇನೆ. ಅದರ ಬಗ್ಗೆ ವಿಚಾರಣೆ ಮಾಡಬೇಕು. ಎರಡನೆಯದು, ಇದೇ ಕೆಲಸಕ್ಕಾಗಿ ಕೆಲವು ಗೂಂಡಾ ಗಳು ಇರುತ್ತಾರೆ, ಗಲಭೆ ಮಾಡುವುದೇ ಅವರ ಕರ್ತವ್ಯ. ಅಂತಹ ಕಡೆ ಏನಾದರೂ ಪ್ಯೂನಿಟೀವ್ ಟ್ಯಾಕ್ಸ್ ಹಾಕುವ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತದೆಯೇ ?

ಶ್ರೀ ಧರ್ಮಸಿಂಗ್ :– ಸ್ಟ್ಯಾಬಿಂಗ್ ಕೇಸ್ ಬಗ್ಗೆ ಎಕ್ಸಾಮಿನ್ ಮಾಡಿಸುತ್ತೇನೆ. ಇತರ ವಿಷಯಗಳ ಬಗ್ಗೆಯೂ ಸರ್ಕಾರ ಯೋಚನೆ ಮಾಡುತ್ತದೆ.

ವಿಷಯ :– ಹರಪನಹಳ್ಳಿ ತಾಲ್ಲೂಕಿನಲ್ಲಿ ಅಗ್ನಿ ಶಾಮಕದಳ ವಿಲ್ಲದೇ ಇರುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 288 (789)

ಶ್ರೀ ಬಿ. ಹೆಚ್. ಯಂಕಾನಾಯಕ (ಹರಪನ ಹಳ್ಳಿ) :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹರಪನಹಳ್ಳಿಯ ತಾಲ್ಲೂಕಿಗೆ ಹತ್ತಿರ ಯಾವುದೇ ಅಗ್ನಿ ಶಾಮಕ ದಳವಿಲ್ಲದೇ ತಾಲ್ಲೂಕಿನಲ್ಲಿ ಬೆಂಕಿ ಅನಾಹುತವಾದಾಗ ತೊಂದರೆ ಪಡುತ್ತಿರುವುದರಿಂದ ಅಗ್ನಿಶಾಮಕದಳವೊಂದನ್ನು ತೆರೆಯಬೇಕೆಂಬ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?